ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ 63 ಗ್ರಾಮಗಳಲ್ಲಿ ಬಾವಿಗಳ ಕೆಲಸ ಪ್ರಾರಂಭವಾಗಿ ಅವುಗಳು ಬೇರೆ ಬೇರೆ ಹಂತದಲ್ಲಿ ಇವೆ.

ಶ್ರೀ ಜಿ. ಪುಟ್ಟಸ್ವಾಮಿ.—ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ಈ ಕ್ಷೇತ್ರದ ಎಷ್ಟು ಗ್ರಾಮಗಳನ್ನು ಸೇರಿಸಲಾಗಿದೆ ಮತ್ತು ಇನ್ನೂ ಎಷ್ಟು ಗ್ರಾಮಗಳನ್ನು ಈ ಯೋಜನೆಯಲ್ಲಿ ಸೇರಿಸಬೇಕಾಗಿದೆ ಎಂದು ಕೇಳಿದ್ದಕ್ಕೆ 5 ಮತ್ತು 7 ಗ್ರಾಮಗಳು ಎಂದು ಹೇಳಿದ್ದೀರಿ ಇವು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇವುಗಳಲ್ಲಿ ಕಳಸ, ಗೋವಿನ ಬೀಡು, ಬದರೆ ಬಿ. ಹೊಸಹಳ್ಳಿ, ಜವಳಿ ಈ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಈಗಾಗಲೇ ಮಂಜೂರು ಮಾಡಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಈ ಯೋಜನೆಗೆ ಸೇರಿಸಬೇಕಾದ ಗ್ರಾಮಗಳು ಯಾವುವೆಂದರೆ ಮೂಡಿಗೆರೆ, ಮೇಕನಹಳ್ಳಿ, ಬಂಕರ್‌ಪೇಟೆ, ಕಡಿದಾಳ್, ಬುಡೇಹೊಳೆ, ದೇವರ ಹುಂಡ, ನಂದಿಗುಡ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಲೆನಾಡಿನಲ್ಲಿ ಬಹುತೇಕ ಬಾವಿಗಳಲ್ಲಿ ದಟ್ಟವಾದ ಸಾಯಿಲ್ ಕ್ಯಾಪ್ ಜಾಸ್ತಿ ಇರುವುದರಿಂದ ಆ ಬಾವಿಗಳಲ್ಲಿ ಸಾಕಷ್ಟು ನೀರು ಸಿಕ್ಕುವುದಿಲ್ಲ. ಆದ್ದರಿಂದ ಇನ್ನು ಮುಂದಕ್ಕೆ ಕೂಡ ಮಲೆನಾಡಿನಲ್ಲಿ ಬಾವಿಗಳನ್ನು ತೋಡಿದರೂ ಕೂಡ ಉಪಯೋಗವಾಗದೆ ಇರುವುದರಿಂದ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಅಲ್ಲಿ ಬಾವಿಗಳನ್ನು ತೋಡುವುದರಿಂದ ನೀರು ಬರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಮೂಡಿಗೆರೆ ಟೌನಿನ ನೀರು ಸರಬರಾಜಿಗೆ ಸಂಬಂಧಪಟ್ಟ ಹಾಗೆ ಮೊದಲು 1,45,000 ರೂಪಾಯಿಗಳ ಎಸ್ಟಿಮೇಟನ್ನು ತಯಾರಿಸಿ, ನಂತರ ಎರಡು ಲಕ್ಷ ರೂಪಾಯಿ ಚಿಲ್ಲರೆ ಎಸ್ಟಿಮೇಟನ್ನು ತಯಾರು ಮಾಡಬೇಕೆಂದು ನಿಶ್ಚಿತ ಮಾಡಿದ್ದರೂ ಕೂಡ ಅದನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಮೊದಲು ಮಾಡಿದಂತಹ ಎಸ್ಟಿಮೇಟನ್ನು ತಯಾರುಮಾಡಿರುವುದು ನಿಜವಲ್ಲವೇ ?

Sri M. MALLIKARJUNASWAMY.—We have already proposed to take up this work.

ಅಧ್ಯಕ್ಷರು.—ಶ್ರೀ ಪ್ರಭುರಾಜ ಪಾಟೀಲ್‌ರವರ 94ನೇ ಪ್ರಶ್ನೆಯನ್ನು ಶ್ರೀ ಆರ್. ಎಸ್. ಪಾಟೀಲ್‌ರವರು ಕೇಳಬಹುದು.

Service Co-operative Societies in Yelburga Taluk

94. Sri PRABHURAJ PATIL (Yelburga).—

Will the Minister for Co-operation be pleased to state :—

(*a*) the number of service Co-operative Societies *functioning* and defunct in Yelburga Taluk of Raichur District ;

(*b*) the reasons for the work of the Societies coming to stand-still ;

(*c*) the steps taken so far or proposed to be taken by Government for their re-opening ?

Sri A. SHANKARA ALVA (Minister for Co-operation).—

(*a*) Co-operative Service Societies functioning 35.
Defunct Co-operative Service Societies Nil.

(SRI A. SHANKARA ALVA)

(*b*) Does not arise in view of reply to clause (*a*).

(*c*) Does not arise in view of reply to clause (*a*).

ಶ್ರೀ ಆರ್. ಎಸ್. ಪಾಟೀಲ್.—ಈ ವಿಷಯದಲ್ಲಿ ಪ್ರಶ್ನೆಯನ್ನು ಕೇಳುತ್ತಾ ಇರುವುದು ಅಲ್ಲಿ ಕೆಲವು ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗಳು ಕೆಲಸ ಮಾಡದೆ ಇರತಕ್ಕಂಥಾದ್ದನ್ನು ತಿಳಿದು ಕೊಂಡು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೆ ಈ ಪ್ರಶ್ನೆಗೆ ತಮಗೆ ಬಂದಿರತಕ್ಕ ಉತ್ತರ ತಪ್ಪು ಇರಬಹುದು ಎಂದು ಕಾಣುತ್ತದೆ. ಆದ್ದರಿಂದ ಅದನ್ನು ಪುನಃ ಇನ್‌ವೆಸ್ಟಿಗೇಟ್ ಮಾಡಿ ಮತ್ತೆ ತಿಳಿಸುತ್ತೀರಾ?

ಶ್ರೀ ಎ. ಶಂಕರ ಆಳ್ವ.—ಅಲ್ಲಿ ಈಗ ಕೆಲಸ ಮಾಡುತ್ತಾ ಇರತಕ್ಕ ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳು 35 ಮಾತ್ರ ಇವೆ. 81 ಅಗ್ರಿಕರ್‌ಚರಲ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ಮತ್ತು ರಾರ್ಡ್‌ಸ್ಕೇರ್ ಅಂಡ್ ಸ್ಕ್ವಾರ್‌ಸ್ಕೇರ್ ಕೋ-ಆಪರೇಟಿವ್ ಸೊಸೈಟಿಗಳು ಇವೆ. ಅವು ಗಳೆರಾ ಕೆಲಸ ಮಾಡುತ್ತಿವೆ.

Kannada Typewriting and Shorthand

107. Sri T. R. SHAMANNA (Fort). —

Will the Minister for Education be pleased to state :—

(*a*) the steps taken by the Government to popularise Kannada Typewring and Shorthand ;

(*b*) whether there is any proposal to give special assistance to recognised Commercial Institutes to give trainig in Kannada Typewriting and Kannada Shorthand ?

Sri A. R. BADARINAYANA IYENGAR (Minister for Education). —

(*a*) (i) Government have sanctioned 200 Scholarships annually to students learning Kannada Typewriting and Shorthand.

(ii) lower tuition fees has been prescribed for students learning Kannana Typewriting and Shorthand.

(iii) Special Pay has been sanctioned to the Typists and Stenographers, Grand I and II, at the following rate :

(1) those who have passed or those who pass both Kannada Typewriting (Junior) and Kannada Shorthand (Junior) Examinations or those who have passed or those who pass Kannada Typewriting (Senior) Examination Rs. 15 per month.

(2) those who have passed or who pass Kannada Typewriting (Senior) and Kannada Shorthand (Senior) Examinations Rs. 25 per month.

(iv) Proposal to introduce Kannada Typewriting and Shorthand as one of the courses in certain selected Institutions is under consideration.

(*b*) The matter will be examined.